
ವಲಸೆ ಬಂದ, ಈಗ ಎಂಬತ್ತು ವರ್ಷ ಪ್ರಾಯದ ಮಹಿಳೆ 'ಮಾ' ತನ್ನ ಮನಸ್ಸಿನ ಮೇಲುಂಟಾದ ಗಾಯ, ಆಘಾತಗಳೊಂದಿಗೆ ಸಂಧಾನ ಮಾಡಿಕೊಳ್ಳುವ ಈ ಕಾದಂಬರಿ 'ದಿ ಟೂಂಬ್ ಆಫ್ ಸ್ಯಾಂಡ್' ಎಂದು ಇಂಗ್ಲಿಷಿಗೆ ಅನುವಾದವಾಗಿದೆ.

ಸಾಂಪ್ರದಾಯಿಕ ಕುಟುಂಬವೊಂದರಲ್ಲಿ ಯುವತಿಯೊಬ್ಬಳ ಬದುಕಿನ ಸುತ್ತ ಇರುವ ಕಥೆ 'ಬಿಟಿಯಾ' (1991) ಎಂಬ ಕಾದಂಬರಿಯಾಗಿ ಅಲ್ಕಾ ಸರೋಗಿಯವರ ಲೇಖನಿಯಲ್ಲಿ ಮೂಡಿಬರುತ್ತದೆ. 2001ರಲ್ಲಿ ಪ್ರಕಟವಾದ ಅವರ 'ಕಾಲಕಥಾ' ಎಂಬ ಸಂಕಲನದ ಕಥೆಗಳು ಮಾನವ ಗುಣದ ಅನೇಕ ಆಯಾಮಗಳನ್ನು ವಿಶ್ಲೇಷಿಸುತ್ತವೆ.




ಹೀಗೆ ಭಾರತದ ವಿವಿಧ ಭಾಷೆಗಳಲ್ಲಿ ಲೇಖಕಿಯರು ತಮ್ಮ ಪ್ರಾಂತ್ಯ, ಸಮುದಾಯ, ಸಂಸ್ಕೃತಿಗಳ ಅನುಭವಗಳನ್ನು ಪ್ರಸ್ತುತ ಸಮಾಜದ, ಕುಟುಂಬದ ಹಿನ್ನೆಲೆಯಲ್ಲಿ ಒರೆಗೆ ಹಚ್ಚಿ ನೋಡುತ್ತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಭಾರತದ ಅನೇಕ ಶಿಕ್ಷಿತ ಮಹಿಳೆಯರು ತಮ್ಮ ಆತ್ಮಕಥೆಗಳ ಮೂಲಕ ಭಾರತದಲ್ಲಿ ಹೆಣ್ಣಿನ ಬದುಕಿನ ಬಹುರೂಪಿ ಸ್ತರಗಳನ್ನು ಓದುಗರ ಗಮನಕ್ಕೆ ತರುತ್ತಾರೆ. ಹತ್ತೊಂಬತ್ತನೇ ಶತಮಾನದ ಬಂಗಾಲದ ರಾಸುಂದರಿ ದೇವಿಯ 'ಅಮಾರ್ ಜೀಬೋನ್' (ನನ್ನ ಜೀವನ) ಕೃತಿಯಿಂದ ಪ್ರಾರಂಭಿಸಿ, ಬಾಬಾ ಸಾಹೇಬ ಅಂಬೇಡ್ಕರ್‌ರವರ ಪತ್ನಿಯಾಗಿ, ಹಿತೈಷಿಯಾಗಿ, ವೈದ್ಯೆಯಾಗಿ ಅವರ ಕಾರ್ಯಗಳಲ್ಲಿ ಹೆಗಲು ಕೊಟ್ಟ ಸವಿತಾ ಅಂಬೇಡ್ಕರ್ ಬರೆದ 'ಬಾಬಾ ಸಾಹೇಬ' (2022); ಭಾರತದ ಪ್ರಪ್ರಥಮ ಮಹಿಳಾ ಮುಖ್ಯ ನ್ಯಾಯಮೂರ್ತಿಯಾಗಿ ಹೈಕೋರ್ಟಿನಲ್ಲಿ ಕಾರ್ಯ ನಿರ್ವಹಿಸಿದ, ಹಲವು ಪ್ರಥಮಗಳನ್ನು ಸಾಧಿಸಿದ ಮಹಿಳೆ ಲೀಲಾ ಸೇಠ್ ಬರೆದ 'ಆನ್ ಬ್ಯಾಲೆನ್ಸ್' (2003); ಪೆಪ್ಸಿ ಕೋ. ನಲ್ಲಿ ಅಧ್ಯಕ್ಷರಾಗಿ, ಸಿಇಒ ಆಗಿ ನಿವೃತ್ತರಾದ ಇಂದ್ರಾ ನೂಯಿ ಮಹಿಳೆಯ ಜೀವನದಲ್ಲಿ ಉದ್ಯೋಗ, ಕುಟುಂಬಗಳ ಸಮತೋಲನವನ್ನು ಸಾಧಿಸುವಲ್ಲಿ ಉಂಟಾಗುವ ಹೋರಾಟಗಳನ್ನು ಪ್ರಸ್ತಾಪಿಸುತ್ತಲೇ ಭಾರತದಲ್ಲಿ ಉದ್ಯೋಗಸ್ಥ ಮಹಿಳೆಯರ ಭವಿಷ್ಯದ ಬಗ್ಗೆ ತಮ್ಮ ಆಶೋತ್ತರಗಳನ್ನು ವ್ಯಕ್ತಪಡಿಸುವ 'ಮೈ ಲೈಫ್ ಇನ್ ಫುಲ್' (2021); ಆಂಧ್ರಪ್ರದೇಶದ ಖಾಜಿಪೇಟ್‌ನ ದಲಿತ ಕುಟುಂಬವೊಂದರಲ್ಲಿ ಹುಟ್ಟಿ ಮುಂದೆ ಭೌತಶಾಸ್ತ್ರದ ಎಂಜಿನಿಯರ್ ಆಗಿ ಪ್ರಸ್ತುತ ನ್ಯೂಯಾರ್ಕಿನಲ್ಲಿರುವ ಸುಜಾತಾ ಗಿಡ್ಲಾ ಅವರ 'ಆ್ಯಂಟ್ಸ್ ಎಮಂಗ್ ಎಲಿಫೆಂಟ್ಸ್'(2017) ಎಂಬ ಆತ್ಮಕಥೆ, ಆಧುನಿಕ ಭಾರತದಲ್ಲಿ ತನ್ನ ಕುಟುಂಬ ಅನುಭವಿಸಿದ ತಾರತಮ್ಯ, 'ಅಸ್ಪೃಶ್ಯ' ಎಂಬ ಹಣೆಪಟ್ಟಿ ಹಚ್ಚಿಕೊಂಡೇ ಸಹಿಸಿದ ಅವಮಾನಗಳ ಮನಕಲಕುವ ಚಿತ್ರಣ ನೀಡುತ್ತದೆ.

ಹೀಗೆ ಅಸಂಖ್ಯ ಮಹಿಳೆಯರು ಇವತ್ತು ತಮ್ಮ ಬದುಕಿನ ಕಥೆಗಳನ್ನು ನಿಸ್ಸಂಕೋಚವಾಗಿ ಹೇಳಿಕೊಳ್ಳುತ್ತಾ ಸಮಾಜದೊಂದಿಗೂ, ತಮ್ಮ ಅಂತರಾತ್ಮದೊಂದಿಗೂ ಅನುಸಂಧಾನದತ್ತ ಹೆಜ್ಜೆ ಹಾಕುತ್ತಿದ್ದಾರೆ. ಇಲ್ಲಿ, ಈ ಲೇಖನದ ವ್ಯಾಪ್ತಿಯಲ್ಲಿ, ಭಾರತದ ಎಲ್ಲ ಮಹತ್ವದ ಲೇಖಕಿಯರ ಕುರಿತು ಬರೆಯುವುದು ಹಾಗಿರಲಿ, ಕೇವಲ ಹೆಸರನ್ನು ಪ್ರಸ್ತಾಪಿಸಿದರೂ ಇದೊಂದು ಮಹಾಪ್ರಬಂಧವೇ ಆಗಿಬಿಡುವಷ್ಟರ ಮಟ್ಟಿಗೆ ಮಹಿಳಾಸಾಹಿತ್ಯದ ಫಸಲು ಭಾರತದಲ್ಲಿ ಹುಲುಸಾಗಿ ಬೆಳೆಯುತ್ತಿದೆ. ಎಂತಲೇ ದಕ್ಷಿಣ ಭಾರತದ ಭಾಷೆಗಳಲ್ಲಿ ಹಾಗೂ ಕೆಲ ಈಶಾನ್ಯ ಮತ್ತು ಉತ್ತರ ಭಾರತದ ಭಾಷಾ ಸಾಹಿತಿಗಳು ಹಾಗೂ ಜಾಗತಿಕವಾಗಿ ಗುರುತಿಸಿಕೊಂಡ ಕೆಲ ಇತ್ತೀಚಿನ ಲೇಖಕಿಯರನ್ನಷ್ಟೇ ಇಲ್ಲಿ ಹ್ರಸ್ವವಾಗಿ ಪರಿಚಯಿಸಲು ಸಾಧ್ಯವಾಗಿದೆ. ಇನ್ನೂ ಅನೇಕಾನೇಕ ಮಹತ್ವದ ಲೇಖಕಿಯರನ್ನು ಇಲ್ಲಿ ಕಾಣಿಸಲಾಗುತ್ತಿಲ್ಲ ಎಂಬ ಖೇದದೊಂದಿಗೇ ಭಾರತೀಯ ಲೇಖಕಿಯರು ತಮ್ಮ ಪ್ರಜ್ಞೆಯನ್ನು, ಅಭಿವ್ಯಕ್ತಿಯನ್ನು ವಿಸ್ತರಿಸಿಕೊಂಡಿರುವ ಬಗೆಗೆ ಬೆರಗಾಗುತ್ತಲೇ ತಂತ್ರಜ್ಞಾನದ ಯುಗ ದಾಪುಗಾಲು ಹಾಕುತ್ತಾ ಸಾಗುತ್ತಿರುವ ಈ ಕಾಲಘಟ್ಟದಲ್ಲಿ ಮುಂಬರುವ ತಲೆಮಾರಿನ ಲೇಖಕಿಯರು ಸೃಜನಶೀಲ ಅಭಿವ್ಯಕ್ತಿಯ ಯಾವ ದಿಕ್ಕು ಹಿಡಿಯಬಹುದೆಂಬ ಕುತೂಹಲ ನಮ್ಮನ್ನು ಇನ್ನಷ್ಟು ಓದಿಗೆ ಪ್ರೇರೇಪಿಸುತ್ತದೆ.

●